**ದಿನಾಂಕಃ 09-09-2024** **FDP 3/2016 (RW-1)**

**ಇಂದು ದಿನಾಂಕಃ 09-09-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಅರ್ಜಿದಾರರ ಪರವಾಗಿ ಶ್ರೀ MSS ವಕೀಲರಿಂದಃ-**

ಸರ್ವೆ ನಂ. 34/4 ರ 4 ಎಕರೆ 4 ಗುಂಟೆ ಜಮೀನು ಮತ್ತು ಸರ್ವೆ ನಂ. 43 ರ 3 ಎಕರೆ 23 ಗುಂಟೆ ಜಮೀನು ನಿಮ್ಮ ತಂದೆಗೆ ಯಾವ ಆಧಾರದ ಮೇಲೆ ವರ್ಗಾವಣೆ ಆಗಿದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಸರ್ವೆ ನಂ. 34/4 ರ ಜಮೀನು ನನ್ನ ಅಜ್ಜಿ ಅವರಿಗೆ ನೋಡಿಕೊಂಡ ಕಾರಣ ನನಗೆ ನೀಡಿದ್ದಾರೆ ಮತ್ತು ಸರ್ವೆ ನಂ. 43 ರ ಜಮೀನು ನಾವು ಖರೀದಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಮ್ಮ ಊರಲ್ಲಿದ್ದ ಜಮೀನನ್ನು ಮಾರಾಟ ಮಾಡಿ ಸರ್ವೆ ನಂ. 43 ರ ಜಮೀನು ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಅಥವಾ ನನ್ನ ಗಂಡ ಸ್ವಂತ ಖರೀದಿ ಮಾಡಲು ಅರ್ಹರಿರುವುದಿಲ್ಲ ಎಂದರೆ ಸಾಕ್ಷಿ ಬೇರೆ ಜಮೀನನ್ನು ಮಾರಾಟ ಮಾಡಿ ತೆಗೆದುಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಬೇರೆ ಜಮೀನನ್ನು ಮಾರಾಟ ಮಾಡಿದ್ದೇವೆ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಮೇಲೆ ಹೇಳಿರುವ ಸರ್ವೆ ನಂ. 34/4 ಮತ್ತು ಸರ್ವೆ ನಂ. 43 ರ 7 ಎಕರೆ 34 ಗುಂಟೆ ಜಮೀನು ನನ್ನ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿ ಮುಂದು ವರೆದು ನನ್ನ ಗಂಡನ ಹೆಸರಿನಲ್ಲಿ ವರ್ಗಾವಣೆ ಮಾಡಿಸಿಕೊಳ್ಳಲು ಹೇಳಿದ್ದೇನೆ ಆದರೆ ಅವರು ಮಾಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿರುವ ಜಮೀನುಗಳು ನನ್ನ ತವರು ಮನೆಯಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ.

34/4 ರ ಜಮೀನು ನನ್ನ ಅಜ್ಜಿ ಅವರಿಗೆ ನೋಡಿಕೊಂಡ ಕಾರಣ ನನಗೆ ನೀಡಿದ್ದಾರೆ ಎಂದು ತೋರಿಸಲು ಯಾವುದಾದರು ದಾಖಲೆ ಇದೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಿಂದ ಡಿಕ್ರಿ ಅಥವಾ ನೊಂದಾಯಿತ ಪತ್ರ ಇಲ್ಲ ಎಂದರೆ ಸರಿ. ಒಟ್ಟು ಕುಟುಂಬದ ಆಧಾರದ ಮೇಲೆ ಹೇಳಿರುವ 7 ಎಕರೆ 34 ಗುಂಟೆ ಜಮೀನು ನನ್ನ ತಂದೆ ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಈಗ 1-2 ವರ್ಷಗಳ ಹಿಂದೆ ಯಿಂದ ಈ ಪ್ರಕರಣದಲ್ಲಿ ನಾನು ವಕೀಲರಿಗೆ ಇಟ್ಟು ಹಾಜರಾಗುತ್ತಿದ್ದೇನೆ. 2016 ರಲ್ಲಿ ನನಗೆ ಈ ಪ್ರಕರಣದ ನೋಟಿಸ ಮುಟ್ಟಿದ ನಂತರ ವಕೀಲರಿಗೆ ನೇಮಿಸಿದ್ದೇನೆ ಎಂದರೆ ಸರಿ. ಪ್ರಾಥಮಿಕ ಡಿಕ್ರಿಯಲಿರುವ 7 ಆಸ್ತಿಗಳ ಜೊತೆ ಬೇರೆ 7 ಆಸ್ತಿಗಳು ಸಹ ಈ ಪ್ರಕರಣದ ಮೊದಲನೇ ಅರ್ಜಯಲ್ಲಿ ಇತ್ತು ಎಂದರೆ ಸರಿಯಲ್ಲ. ಮೇಲೆ ಹೇಳಿರುವ ನನ್ನ ಹೆಸರಿನ ಮೇಲೆ ನಮುದು ಇರುವ 2 ಜಮೀನುಗಳು ಸಹ ನನ್ನ ಮೊದಲನೆಯ ಅರ್ಜಿಯಲಿ ಸೇರಿಸಲಾಗಿತ್ತು ಎಂದರೆ ಸರಿಯಲ್ಲ. 2016 ರಿಂದ 2023 ರವರೆಗೆ ಸದರಿ ಆಸ್ತಿಗಳನ್ನು ಸೇರಿಸಿದ್ದು ತಪ್ಪು ಇರುತ್ತದೆ ಎಂದು ನಾನ ತಕರಾರು ಮಾಡಿಲ್ಲ ಎಂದರೆ ಸರಿ.

ಮನೆ ಸಂಖ್ಯೆಃ 1-53 ಗೆ ಸಂಬಂಧಪಟ್ಟಂತೆ ನಾನು ವಾದಿಯ ಅರ್ಜಿದಾರನ ವಿರುದ್ದ ಇನ್ನೊಂದು

ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯನ್ನು ಯಾವ ಕಾರಣಕ್ಕಾಗಿ ದಾಖಲಿಸಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಮಗೆ ಇರಲು ಮನೆಯಿಲ ಆದ್ದರಿಂದ ಮನೆಗಾಗಿ ಸದರಿ ದಾವೆಯನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದಾವೆ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ಮುಂದುವರೆದು ನನಗೆ ಹುಷಾರಿಲ್ಲದ ಕಾರಣ ನಾನು ನ್ಯಾಯಾಲಯಕ್ಕೆ ಬರದೇ ಇರುವುದರಿಂದ ವಜಾಗೊಂಡಿರುತ್ತದೆ ಎಂದು ನುಡಿಯುತ್ತಾರೆ. ಈ ರೀತಿ ನಾನು ನನಗೆ ಹುಷಾರಿಲ್ಲದ ಕಾರಣ ನಾನು ನ್ಯಾಯಾಲಯಕ್ಕೆ ಬರದೇ ಇರುವುದರಿಂದ ವಜಾಗೊಂಡಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಕೊನೆಯ ತೀರ್ಪು ಹಾಗೂ ಡಿಕ್ರಿ ಸಹ ಆಗಿರುತ್ತದೆ ಎಂದರೆ ಸಾಕ್ಷಿ ದಾವೆ ಅಲ್ಲಿಗೆ ನಿಂತಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ತೀರ್ಪು ಆದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಾಥಮಿಕ ಡಿಕ್ರಿಯಲಿರುವ 7 ಆಸ್ತಿಗಳ ಬಿಟ್ಟು ಉಳಿದ 7 ಆಸ್ತಿಗಳಲ್ಲಿ ವಿರುದ್ದ ವಜಾಗೊಂಡ ಕಾರಣ ನನಗೆ ಪಾಲು ಬೇಕು ಎಂದು ಈಗ ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಅಣ್ಣ ತಮ್ಮಂದಿರುವ ಅರ್ಜಿದಾರರಿಗೆ ಸತಾಯಿಸಲು ಮತ್ತು ಪ್ರಕರಣವನು ವಿಳಂಬಗೊಳಿಸಲು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗಾಗಲೇ 2 ಆಸ್ತಿಗಳನ್ನು ನೀಡಿದ ಕಾರಣ ನನಗೆ ಮೂಲದಾವೆಯಲ್ಲಿ ಪಕ್ಷಗಾರನ್ನಾಗಿ ಸೇರಿಸಿಲ್ಲ ಎಂದರೆ ಸಾಕ್ಷಿ ಈಗಾಗಲೇ ಹೇಳಿದಂತೆ 1 ಆಸ್ತಿ ನನಗೆ ನನ್ನ ಅಜ್ಜಿ ನೀಡಿರುತ್ತಾಳೆ ಮತ್ತು ಇನ್ನೊಂದು ಆಸ್ತಿ ನಾನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗ ಫಕೀರಪ್ಪ ರವರ ಕುಟುಂಬದ ಎಲ್ಲಾ ಆಸ್ತಿಗಳನು ಸೇರಿಸಿ ಪಾಲು ಮಾಡುವುದರಿಂದ ನನಗೆ ಯಾವುದೇ ಹಾನಿ ಉಂಟಾಗುವುದಿಲ್ಲ ಎಂದರೆ ಸಾಕ್ಷಿ ನನಗೆ ನನ್ನ ತಂದೆಯ ಆಸ್ತಿ ಬೇಕು ಎಂದು ನುಡಿಯುತ್ತಾರೆ. ಈ ಅರ್ಜಿಯಲ್ಲಿರುವ ಆಸ್ತಿಗಳಲ್ಲಿ ನನಗೆ ಹಿತಾಸಕ್ತಿ ಇಲ್ಲದೇ ಇದ್ದರೂ ಸಹ ಅರ್ಜಿದಾರರಿಗೆ ಸತಾಯಿಸಲು ಸುಳ್ಳು ಶಪಥ ಪತ್ರ ಸಲ್ಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗಾಗಲೇ ಮೇಲೆ ಹೇಳಿರುವ ಆಸ್ತಿಗಳು ನೀಡಿದ ಕಾರಣ ಅರ್ಜಿಯಲ್ಲಿರುವ ಆಸ್ತಿಗಳಿಗೆ ನನಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿ ನನ್ನ ಆಸ್ತಿಗಳಿಗೆ ಹಾಗೂ ಅರ್ಜಿದಾರರ ಆಸ್ತಿಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ.

1996 ರಿಂದ ನನಗೆ ದಾವೆಯ ಬಗ್ಗೆ ಗೊತ್ತಿದ್ದರೂ ಸಹ ನನ್ನ ಪಾಲು ಕೇಳದೇ ಈ ಅರ್ಜಿದಾರರರಿಗೆ ಸತಾಯಿಸಲು ಸುಳ್ಳು ಶಪಥ ಪತ್ರ ಸಲ್ಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲಿನ 14 ಆಸ್ತಿಗಳು ಸೇರಿಸಿದಾಗ ಯಾವುದೇ ತಕರಾರನ್ನು ಸಲ್ಲಿಸದೇ ಅದರಲಿ 7 ಆಸ್ತಿಗಳ ವಿರುದ್ದ ಅರ್ಜಿ ವಜಾಗೊಂಡ ನಂತರ ಈ ಅರ್ಜಿಯಲ್ಲಿ ಪಾಲು ಬರುತ್ತದೆ ಎಂದು ದುರುದ್ದೇಶದಿಂದ

**ದಿನಾಂಕಃ 09-09-2024** **FDP 3/2016 (RW-1)**

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿಯ ಆಸ್ತಿಗಳಲ್ಲಿ ನನಗೆ ಯಾವುದೇ ಪಾಲು ಇಲ್ಲದೇ ಇದ್ದರೂ ಸಹ ಸುಳ್ಳು ಶಪಥ ಪತ್ರ ಸಲ್ಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**